ಕರ್ನಾಟಕ ಸರ್ಕಾರ (ಸಿ.ಆರ್.ಪಿ. 67)

| |
|---|
| ಹೇಳಿಕೆ ಹಾಳೆ<br>(ಆರ್.ಪಿ. ಸಂಖ್ಯೆ 57)<br>ನಮೂನೆ ಸಂಖ್ಯೆ 4<br>(ಸಿವಿಲ್) |

ದಿವಾಣಿ ನ್ಯಾಯಾಧೀಶರು ಹಾಗೂ ಪ್ರ.ದ.ನ್ಯಾ.ದಂ. ಹಳಿಯಾಳ
ಇವರ ನ್ಯಾಯಾಲಯದಲ್ಲಿ,

ಸಿ.ಸಿ. ನಂ.: 1817/2022

..................................................................

CW 04
PW 03

| | | |
|---|---|---|
| ಹೆಸರು | : | ಸುರೇಶ ಘಾಟಗೆ |
| ತಂದೆಯ ಹೆಸರು | : | ಶಿವಾಜಿ |
| ವಯಸ್ಸು | : | 58 ವರ್ಷ |
| ಉದ್ಯೋಗ | : | ಎ ಎಸ್ ಐ, ದಾಂಡೇಲಿ ಗ್ರಾಮೀಣ ಪೊಲೀಸ ಠಾಣೆ, |
| ವಾಸಸ್ಥಳ | : | ಹಳಿಯಾಳ. |

ದಿನಾಂಕ 05-01-2026 ರಂದು ಸತ್ಯಪ್ರತಿಜ್ಞೆ ಮೇಲೆ ಪ್ರಮಾಣವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ** : ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದ :

ನಾನು 2019 ರಿಂದ 2025 ರ ವರೆಗೆ ಹಳಿಯಾಳ ಪೊಲೀಸ ಠಾಣೆಯಲ್ಲಿ ಎ ಎಸ್ ಐ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ದಿನಾಂಕ 12-09-2021 ರಂದು ನಾನು ಮನೆಯಲ್ಲಿ ವಿಶಾಂತ್ರಿಯಲ್ಲಿ ಇದ್ದಾಗ ರಾತ್ರಿ 11-00 ಗಂಟೆಗೆ ಚಾಸಾ 1 ರವರು ನನಗೆ ಪೋನ್ ಮಾಡಿ ಮುರ್ಕವಾಡದ ಇಕೋ ಕ್ಲಬ್ ನಲ್ಲಿ ಅಂದರ್ ಬಾಹರ್ ಆಟ ಆಡುತ್ತಿದ್ದಾರೆ ಎಂದು ಚಾಸಾ 9 ರವರು ತಿಳಿಸಿದ್ದಾರೆ ಎಂದು ಹೇಳಿದರು. ನನಗೆ ಮತ್ತು ಚಾಸಾ 5 ರಿಂದ ಚಾಸಾ 8 ರವರಿಗೆ ಮಾಹಿತಿಯನ್ನು ತಿಳಿಸಿ ಡಿ ವಾಯ್ ಎಸ್ ಪಿ ರವರ ಅನುಮತಿಯನ್ನು ಈ ಮೇಲ್ ಮುಖಾಂತರ ಪಡೆದಿರುತ್ತೇನೆ ಎಂದು ತಿಳಿಸಿದರು. ನಾನು, ಚಾಸಾ 5 ರಿಂದ ಚಾಸಾ 8 ರವರು ತನಿಖಾ ಸಲಕರಣೆಗಳೊಂದಿಗೆ ರಾತ್ರಿ 11-30 ಕ್ಕೆ ಜೀಪ್ ನಲ್ಲಿ ಹೊರಟು ಮುರ್ಕವಾಡದ ಬಸ್ ನಿಲ್ದಾಣದ ಹತ್ತಿರ 11-55 ಕ್ಕೆ ಹೋಗಿ ಜೀಪ್ ಅನ್ನು ನಿಲ್ಲಿಸಿದೆವು. ಚಾಸಾ 1 ರವರು ಚಾಸಾ 9 ರವರಿಗೆ ಪಂಚರನ್ನು ಕರೆತರಲು ತಿಳಿಸಿದರು. ಚಾಸಾ 9 ರವರು ಚಾಸಾ 2 ಮತ್ತು 3 ರವರನ್ನು ಪಂಚರಾಗಿ ಕರೆತಂದರು. ಅವರಿಗೆ ಭಾತ್ಮಿ ವಿಷಯವನ್ನು ತಿಳಿಸಿ ಒಪ್ಪಿಗೆ ಪಡೆದು ಜೀಪ್ ಅನ್ನು ಅಲ್ಲಿಯೇ ನಿಲ್ಲಿಸಿದೆವು. ಕ್ಲಬ್ ಹತ್ತಿರ ನಾವುಗಳು ಹೋಗಿ

ಮರೆಯಾಗಿ ನಿಂತು ಬಾಗಿಲಿನ ಕಿಂಡಿಯಿಂದ ನೋಡಲಾಗಿ ಇಕೋ ಕ್ಲಬ್ ಎರಡನೇ ಕೋಣೆಯಲ್ಲಿ ಜನ ಸುತ್ತುವರೆದಿದ್ದು, 100 ಒಳಗೆ ಮತ್ತು 100 ಹೊರಗೆ ಎಂಬ ಶಬ್ದ ಕೇಳಿತು. ಆಗ ಅಂದರ್ ಮತ್ತು ಬಾಹರ ಎಂದು ಆಟ ಆಡುತ್ತಿರುವುದನ್ನು ಖಚಿತ ಪಡಿಸಿಕೊಂಡು, ಪಂಚರ ಸಮಕ್ಷಮ ಅವರನ್ನು ಸುತ್ತುವರೆದು ದಾಳಿ ಮಾಡಿದೆವು. ಚಾಸಾ 1 ರವರು ಆರೋಪಿ 2 ರವರನ್ನು ಹಿಡಿದು ವಿಚಾರಿಸಲಾಗಿ ಅವರು ಆ ಕ್ಲಬ್ ಚಿದಾನಂದ ಹರಿಜನ ರವರಿಗೆ ಸೇರಿದ್ದು ಅವರೆ ಆಟ ಆಡಿಸಿ ಹಣ ಸಂಪಾದಿಸಿ ಎಂದು ತಿಳಿಸಿದ್ದಾನೆ ಎಂದು ಹೇಳಿದನು.

ಆರೋಪಿ 2 ರವರ ಅಂಗ ಶೋಧನೆ ಮಾಡಲಾಗಿ ಆತನ ಎಡಗೈಯಲ್ಲಿ 10 ಇಸ್ಪೀಟ್ ಎಲೆಗಳು ಮತ್ತು ಪ್ಯಾಂಟ್ ಬಲಬದಿ ಜೇಬಿನಲ್ಲಿ ರೂ. 8500/- ಹಣ ಸಿಕ್ಕವು. ಅವರನ್ನು ಒಬ್ಬರಂತೆ ವಿಚಾರಿಸಲಾಗಿ ಅವರು ತಮ್ಮ ತಮ್ಮ ಹೆಸರುಗಳನ್ನು ಹೇಳಿದರು. ವಿನಾಯಕನ ಹತ್ತಿರ ರೂ. 1200, ವೆಂಕಟೇಶನ ಹತ್ತಿರ ರೂ. 1140, ಮಾಹದೇವನ ಹತ್ತಿರ ರೂ. 1300/-, ಹೀಗೆ ಒಟ್ಟು 12 ಜನರ ಬಳಿ ರೂ. 28,640 ಗಳು ಸಿಕ್ಕವು ಅಲ್ಲಿಯೇ ಇದ್ದ ಛಾಪೆ ಹಾಗೂ ಹಾಗೂ 52 ಎಲೆಗಳನ್ನು ಪಂಚರ ಸಮಕ್ಷಮ ಜಪ್ತುಪಡಿಸಿಕೊಂಡು ಪಂಚನಾಮೆಯನ್ನು ದಿನಾಂಕ 13-09-2021 ರಂದು ರಾತ್ರಿ 12-15 ರಿಂದ 02-15 ರ ವರೆಗೆ ಜರುಗಿಸಿದೆವು. ಛಾಪೆ, 52 ಎಲೆಗಳು ಮತ್ತು ಹಣವನ್ನು ಜಪ್ತುಪಡಿಸಿಕೊಂಡು ಚಕ್ಕ ಬಂದಿ ತಯಾರಿಸಿದೆವು. ಜಪ್ತುಪಡಿಸಿಕೊಂಡ ವಸ್ತುಗಳು ಮತ್ತು ಆರೋಪಿತರನ್ನು ಠಾಣೆಗೆ ವಶಕ್ಕೆ ಪಡೆದು ಠಾಣೆಗೆ ಬಂದು ಸರ್ಕಾರದ ಪರವಾಗಿ ಚಾಸಾ 1 ರವರು ದೂರು ನೀಡಿದರು. ಸದರಿ ಆರೋಪಿತರನ್ನು ನೋಡಿದರೆ ಗುರುತಿಸುತ್ತೇನೆ. ಈಗ ಐದು ಜನರು ಹಾಜರಿದ್ದು, ಉಳಿದವರು ಗೈರು ಹಾಜರು ಇರುತ್ತಾರೆ ಎನ್ನುತ್ತಾರೆ. ಗೈರು ಹಾಜರು ಇರುವ ಆರೋಪಿತರ ಗುರುತಿಸುವಿಕೆಯ ಬಗ್ಗೆ ಆರೋಪತರ ಪರ ವಕೀಲರು ಯಾವುದೇ ತಕರಾರು ಇರುವುದಿಲ್ಲ ಎನ್ನುತ್ತಾರೆ.

ಜಪ್ತುಪಡಿಸಿಕೊಂಡ 52 ಎಲೆಗಳನ್ನು, ಒಟ್ಟು ರೂ. 28,640 ನಗದು ಹಣವನ್ನು , ಒಂದು ಪ್ಲಾಸ್ಟಿಕ್ ಛಾಪೆಯನ್ನು ನೋಡಿದರೆ ಗುರುತಿಸುತ್ತೇನೆ. ಅವುಗಳು ಈಗ ನ್ಯಾಯಾಲಯದ ಮುಂದೆ ಇರುತ್ತವೆ. ಅವುಗಳನ್ನು ಈಗಾಗಲೇ ಮು.ಮಾ. 1 ರಿಂದ 3 ಎಂದು ಗುರುತಿಸಲಾಯಿತು.

(ಈ ಹಂತದಲ್ಲಿ ಸಸಅ ರವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಅಂತ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೇಳಿದ್ದರಿಂದ ಸಾಕ್ಷ್ಯ ಹಾಗೂ ಪ್ರಕರಣದ ಇತರ ಅಂಶಗಳನ್ನು ಗಮನಿಸಿ ಪಾಟೀ ಸವಾಲಿಗೆ ಅನುಮತಿ ನೀಡಲಾಯಿತು ).

**<u>ಪಾಟೀ ಸವಾಲು :</u> ಮಾನ್ಯ ಸಹಾಯಕ ಸರಕಾರಿ ಅಭಿಯೋಜಕರಿಂದ.**

ಆ ದಿನ ಮಾಹದೇವನ ಹತ್ತಿರ ರೂ. 1300/-, ಶ್ರೀಕಾಂತನ ಹತ್ತಿರ ರೂ. 1500/-, ಅಶೋಕನ ಹತ್ತಿರ ರೂ. 1650/-, ಬಸವರಾಜನ ಹತ್ತಿರ ರೂ. 1180/-, ಗಾಂಧಿ ಮತ್ತು ನಾರಾಯಣ ರವರ ಹತ್ತಿರ ತಲಾ ರೂ. 1250/- ಮತ್ತು 1450/-, ಫೀಶಪ್ಪನ ಹತ್ತಿರ ರೂ. 2200/-, ಅಲ್ತಾಫ್ ಹತ್ತಿರ ರೂ. 2300/-, ಸಾಗರ ಹತ್ತಿರ ರೂ. 1320/- ಹಾಗೂ ಒಟ್ಟು ರೂ. 28,640 ಹಾಗೂ ಮಂಡದ ಮೇಲೆ ರೂ. 3650 ಹಾಗೂ 52 ಎಲೆಗಳು ಸಿಕ್ಕವು ಎಂದರೆ ಸರಿ.

**ಪಾಟೀ ಸವಾಲುಃ** ಆರೋಪಿತರ ಪರ ಶ್ರೀ ಆರ್ ಎ ಟಿ ವಕೀಲರಿಂದ.

ನಾನು ಹಾಲಿ ಎ ಎಸ್ ಐ ಆಗಿ ದಾಂಡೇಲಿ ಗ್ರಾಮೀಣ ಪೊಲೀಸ ಠಾಣೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ. ದಿನಾಂಕ 12-09-2021 ರಂದು ನನಗೆ ರಾತ್ರಿ 09-00 ಗಂಟೆಯ ವರೆಗೆ ಕರ್ತವ್ಯವಿತ್ತು. ಚಾಸಾ 9 ರವರು ಚಾಸಾ 1 ರವರಿಗೆ ವಿಷಯ ತಿಳಿಸಿದ್ದರು. ಚಾಸಾ 1 ರವರು ನನಗೆ ಮಾಹಿತಿಯನ್ನು ನೀಡಿದರು. ಘಟನಾ ಜಾಗದಿಂದ ಪೊಲೀಸ ಠಾಣೆಗೆ ಸುಮಾರು 10 ಕಿ.ಮೀ ಇರಬಹುದು, ಅಲ್ಲಿಗೆ ತಲುಪಲು 20 ನಿಮಿಷ ಬೇಕು ಎನ್ನುತ್ತಾರೆ. ಘಟನಾ ಜಾಗದ ಕ್ಲಬ್ ನ ಬಾಗಿಲಿನ ಕಿಂಡಿಯಿಂದ 2 ನೇ ಕೋಣೆ ಕಾಣುತ್ತಿತ್ತು. ನಾವು ಘಟನಾ ಜಾಗಕ್ಕೆ ಹೋದಾಗ 12 ಜನ ಇದ್ದರು, ಆರೋಪಿ 1 ರವರು ಜಾಗದಲ್ಲಿ ಇರಲಿಲ್ಲ ಎನ್ನುತ್ತಾರೆ. ಆರೋಪಿತರು ಘಟನಾ ಜಾಗದಲ್ಲಿ ಇಸ್ಪೇಟ್ ಆಟ ಆಡುತ್ತಿರಲಿಲ್ಲ, ಮೇಲಾಧಿಕಾರಿಗಳ ಮಾತು ಕೇಳಿ ಠಾಣೆಯ ಅಂಕಿ ಸಂಖ್ಯೆಗೋಸ್ಕರ ಸುಳ್ಳು ಪ್ರಕರಣ ದಾಖಲಿಸಿರುತ್ತೀರಿ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದ ಮೇಲೆ ಗಣಕೀಕರಿಸಿದೆ)

ಓ.ಹೇ.ಕೇ. ಸರಿ ಅದೆ.

ದಿವಾಣಿ ನ್ಯಾಯಾಧೀಶರು ಹಾಗೂ

ಪ್ರ.ದ.ನ್ಯಾದಂ. ಹಳಿಯಾಳ